# ವಧುವಿಗಾಗಿ ಸ್ಪಾರ್ಕ್ಲಿಂಗ್ ಡೈಮಂಡ್





**ವಜ್ರಾಭರಣಗಳಿಗೆ ಬೇಡಿಕೆ ಹೆಚ್ಚುತ್ತಿದೆ. ಹತ್ತಾರು ವೈವಿಧ್ಯಗಳ ಚಿನ್ನದ ಒಡವೆಗಳು ತಿಜೋರಿಯಲ್ಲಿದ್ದರೂ ವಜ್ರದ ಒಡವೆ ಕಂಡ ಕೂಡಲೇ ಕಣ್ಣುಗಳೂ ವಜ್ರದ ಹೊಳಪಿನ ಜತೆ ಪೈಪೋಟಿ ನಡೆಸುತ್ತವೆ. ಒಂದಾದರೂ ವಜ್ರದ ಒಡವೆಯನ್ನು ಆಭರಣ ಸಂಗ್ರಹಕ್ಕೆ ಸೇರಿಸಿಕೊಳ್ಳುವ ತವಕ ಹೆಂಗಳೆಯರದು. ಇದೀಗ ಸಾಂಪ್ರದಾಯಿಕ ಒಡವೆಗಳಿಗೆ ಆಧುನಿಕ ಟಚ್ ನೀಡಿ ಇನ್ನಷ್ಟು ಆಕರ್ಷಕ ವಿನ್ಯಾಸಗಳಲ್ಲಿ ವಜ್ರದ ಆಭರಣ ಲಭ್ಯ. ಜೊತೆಗೆ ಮದುಮಗಳಿಗಾಗಿಯೇ ವಿಶೇಷವಾಗಿ ರೂಪುಗೊಳಿಸಿದ ವಜ್ರದ ಒಡವೆಗಳು ಹೆಚ್ಚು ಜನಪ್ರಿಯವಾಗುತ್ತಿವೆ. ಟ್ರೆಂಡಿ ಹಾಗೂ ಎಲಿಗೆಂಟ್ ಲುಕ್ ನೀಡುವ ವಜ್ರದ ಸೆಟ್‌ಗಳಲ್ಲಿ ಸ್ಪಾರ್ಕ್ಲಿಂಗ್ ಆಭರಣವೂ ಒಂದು.**

■ **ಉಮಾ ವೇಣೂರು**

ಇದೀಗ ಮದುವೆಯ ಸೀಸನ್. ಆಭರಣ ಪ್ರಿಯೆಯಾಗಿರುವ ಹೆಣ್ಣಿಗೆ ವಿಭಿನ್ನವಾಗಿ ಮಿಂಚುವ ಹವಣಿಕೆ. ಚಿನ್ನದಲ್ಲಿ ಮಾಡಿದ ಆಭರಣ ಎಷ್ಟೇ ಮನಸ್ಸಿಗೆ ಮುದ ನೀಡಿದರೂ, ಹತ್ತಾರು ಮಾದರಿಯ ನೆಕ್ಲೇಸ್, ಬಳೆ, ಸರ, ಕಿವಿಯೋಲೆಗಳು ತಿಜೋರಿಯಲ್ಲಿದ್ದರೂ ಒಂದೇ ಒಂದು ವಜ್ರದ ನೆಕ್ಲೇಸ್, ಓಲೆ, ಉಂಗುರ ಇದ್ದರೆ ಎಷ್ಟು ಚೆನ್ನ ಎಂಬ ಆಸೆ ಕಂಗಳಲ್ಲಿ ತುಂಬಿರುತ್ತದೆ. ಇದೀಗ ಮದುವೆಯ ಸೀಸನ್. ವಜ್ರದ ಒಡವೆಗಳಲ್ಲಿ ಮದುವೆ ಹೆಣ್ಣು ಹೇಗೆ ಮಿಂಚಬಹುದು ಎಂಬ ಲೆಕ್ಕಾಚಾರದಲ್ಲೇ ಒಡವೆ ವರ್ತಕರು ಇದೀಗ ವಧುವರರಿಗಾಗಿಯೇ ಅತ್ಯಾಧುನಿಕ ವಿನ್ಯಾಸಗಳ ವಜ್ರದೊಡವೆಗಳ ಸೆಟ್‌ಗಳನ್ನು ಮಾರುಕಟ್ಟೆಗೆ ತಂದಿದ್ದಾರೆ.

ಈಗಿನ ಹೊಸ ಟ್ರೆಂಡ್‌ಗೆ ತಕ್ಕಂತೆ ಹಲವು ವಿನ್ಯಾಸಗಳ ವಜ್ರದ ಆಭರಣಗಳು ಲಭ್ಯ. ವಜ್ರದ ಆಭರಣಗಳ ಮಟ್ಟಿಗೆ ಸ್ಪಾರ್ಕ್ಲಿಂಗ್ ಡೈಮಂಡ್, ಸ್ಟೇಟ್‌ಮೆಂಟ್ ಪೀಸ್, ಟು ಇನ್ ವನ್ ಸೆಟ್ ಮುಂತಾದವು ಮದುಮಗಳಿಗಾಗಿಯೇ ರೂಪಿಸಿದಂಥವು.

ಮದುವೆ ದಿನ ಹೆಣ್ಣು ವಿಶೇಷವಾಗಿ ಅಲಂಕಾರ ಮಾಡಿಕೊಂಡು ಕಣ್ಣು ಕೋರೈಸುವ ವಜ್ರದ ಆಭರಣಗಳನ್ನು ತೊಟ್ಟರೆ ಮದುಮಗ ವಜ್ರದ ಹರಳಿನ ಉಂಗುರ, ಬ್ರೇಸ್ಲೆಟ್, ಪೆಂಡೆಂಟ್ ಮುಂತಾದ ವೈವಿಧ್ಯಗಳನ್ನು ತೊಟ್ಟು ಗಮನ